ಸದನದಲ್ಲಿ ಉತ್ತರಿಸುವ
ಪ್ರಶ್ನೆಗಳ ಪಟ್ಟಿ
ಒಟ್ಟು ಪ್ರಶ್ನೆಗಳು – ೧೫

ಪಟ್ಟಿ–೦೭

# ಕರ್ನಾಟಕ ವಿಧಾನ ಪರಿಷತ್ತು

**ನೂರ ಐವತ್ತೆಂಟನೆಯ ಅಧಿವೇಶನ**
**(ಮುಂದುವರೆದ ಉಪವೇಶನಗಳು)**
**ಬುಧವಾರ, ದಿನಾಂಕ: ೧೧ನೇ ಮಾರ್ಚ್, ೨೦೨೬**

---

**ಸಮೂಹ – III**

೧. ಸಾರಿಗೆ ಮತ್ತು ಮುಜರಾಯಿ ಸಚಿವರು

೨. ಲೋಕೋಪಯೋಗಿ ಸಚಿವರು

೩. ಕಂದಾಯ ಸಚಿವರು

೪. ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು

೫. ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು

೬. ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು

---

## ಬೆಂಗಳೂರು ನೈಸ್ ರಸ್ತೆ ಟೋಲ್‌ಗಳ ಬಗ್ಗೆ

**ಶ್ರೀ ರಾಮೋಜಿಗೌಡ (ಪದವೀಧರರ ಕ್ಷೇತ್ರ) –**

೯೧ (೮೮೨) ಲೋಕೋಪಯೋಗಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೆಂಗಳೂರು ಹೊರವಲಯದಲ್ಲಿರುವ ನೈಸ್ ರಸ್ತೆ ಯೋಜನೆಗೆ ಸರ್ಕಾರ ಹಾಗೂ ಕಂಪನಿಯ ನಡುವೆ ಮಾಡಿಕೊಂಡಿರುವ ಒಪ್ಪಂದದ ಮುಖ್ಯ ಷರತ್ತುಗಳು ಯಾವುವು ; (ಒಪ್ಪಂದದ ಅವಧಿ ಮತ್ತು ನವೀಕರಣದ ಮಾಹಿತಿ ಒದಗಿಸುವುದು)

(ಆ) ನೈಸ್ ರಸ್ತೆಯಲ್ಲಿ ಸಾರ್ವಜನಿಕರಿಂದ ವಸೂಲಿ ಮಾಡಲಾಗುತ್ತಿರುವ ಟೋಲ್ ಶುಲ್ಕವನ್ನು ನಿಗದಿಪಡಿಸುವಲ್ಲಿ ಸರ್ಕಾರದ ಅನುಮೋದನೆ ಪಡೆದಿದೆಯೇ ; ಇಲ್ಲದಿದ್ದರೆ ಕಾರಣವೇನು ;

(ಇ) ಟೋಲ್ ಶುಲ್ಕ ದರಗಳನ್ನು ಮರುಪರಿಶೀಲಿಸಲು ಸರ್ಕಾರ ಯಾವುದೇ ಸಮಿತಿ ಅಥವಾ ಪ್ರಾಧಿಕಾರವನ್ನು ನೇಮಕ ಮಾಡಿದೆಯೇ ; ಇದ್ದರೆ, ಅದರ ವರದಿ ನೀಡುವುದು ;

(ಈ) ನೈಸ್ ರಸ್ತೆಯಲ್ಲಿ ಆಗಾಗಿ ಉಂಟಾಗುತ್ತಿರುವ ಟ್ರಾಫಿಕ್ ಜಾಮ್, ಅಪಘಾತಗಳು ಮತ್ತು ನಿರ್ವಹಣಾ ಕೊರತೆಯ ಕುರಿತು ಸರ್ಕಾರದ ಗಮನಕ್ಕೆ ಬಂದಿದೆಯೇ ; ಸಮಸ್ಯೆಗಳ ನಿವಾರಣೆಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು ;

(ಉ) ಸಾರ್ವಜನಿಕರಿಂದ ಬರುತ್ತಿರುವ ದೂರುಗಳ ಆಧಾರದಲ್ಲಿ ನೈಸ್ ರಸ್ತೆ ನಿರ್ವಹಣೆಯ ಮೇಲ್ವಿಚಾರಣೆ ಮತ್ತು ದಂಡಾತ್ಮಕ ಕ್ರಮಗಳಿಗಾಗಿ ಸರ್ಕಾರ ಯಾವ ವ್ಯವಸ್ಥೆಯನ್ನು ಜಾರಿಗೆ ತಂದಿದೆ ;

(ಊ) ಭವಿಷ್ಯದಲ್ಲಿ ನೈಸ್ ರಸ್ತೆಯನ್ನು ಸರ್ಕಾರದ ನಿಯಂತ್ರಣಕ್ಕೆ ತರಲು ಅಥವಾ ಟೋಲ್ ಶುಲ್ಕ ಕಡಿಮೆಗೊಳಿಸಲು ಸರ್ಕಾರ ಕೈಗೊಳ್ಳಲಿರುವ ಕ್ರಮಗಳೇನು ?

## ಸಿಂಧನೂರು & ಸಿರಗುಪ್ಪ ತಾಲ್ಲೂಕುಗಳನ್ನು ಸಂಪರ್ಕಿಸುವ ನಿಟ್ಟೂರು–ಸಿಂಗಾಪುರ ಸೇತುವೆ ನಿರ್ಮಾಣ ಮಾಡುವ ಬಗ್ಗೆ

**ಶ್ರೀ ಬಸನಗೌಡ ಬಾದರ್ಲಿ (ವಿಧಾನಸಭೆಯಿಂದ ಚುನಾಯಿತರಾದವರು) –**

೯೨ (೯೫೭) ಲೋಕೋಪಯೋಗಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಸಿಂಧನೂರು ಮತ್ತು ಸಿರಗುಪ್ಪ ತಾಲ್ಲೂಕುಗಳ ಹಲವಾರು ಹಳ್ಳಿಗಳಿಗೆ ಸಂಪರ್ಕ ಕಲ್ಪಿಸಲು ತುಂಗಭದ್ರಾ ನದಿಗೆ ಅಡ್ಡಲಾಗಿ ನಿಟ್ಟೂರು–ಸಿಂಗಾಪುರ ಬ್ರಿಡ್ಜ್ ನಿರ್ಮಾಣವು ತುಂಬಾ ಅವಶ್ಯಕವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಬಂದಿದ್ದಲ್ಲಿ, ಸದರಿ ಸೇತುವೆಗೆ ಅಪ್ರೋಚ್ ರಸ್ತೆ ನಿರ್ಮಾಣಕ್ಕೆ ರಾಜ್ಯ ಸರ್ಕಾರದಿಂದ ಭೂಸ್ವಾಧೀನ ಮಾಡುವ ಅವಶ್ಯಕತೆಯಿದ್ದು, ಸದರಿ ಕಾರ್ಯವು ಯಾವ ಹಂತದಲ್ಲಿದೆ ;

(ಇ) ಯಾವ ಕಾಲಮಿತಿಯೊಳಗೆ ಕೇಂದ್ರ ಸರ್ಕಾರದ ಸಹಯೋಗದೊಂದಿಗೆ ರಾಜ್ಯ ಸರ್ಕಾರವು ಸದರಿ ಸೇತುವೆ ನಿರ್ಮಾಣ ಕಾರ್ಯವನ್ನು ಪ್ರಾರಂಭಿಸಿ ಪೂರ್ಣಗೊಳಿಸುತ್ತದೆ ?

## ಸಾರಿಗೆ ಇಲಾಖೆಯ ಲಿಪಿಕ ನೌಕರರು ನಕಲಿ NOC ಪಡೆದಿರುವ ಬಗ್ಗೆ

**ಶ್ರೀ ಟಿ.ಎ. ಶರವಣ (ವಿಧಾನಸಭೆಯಿಂದ ಚುನಾಯಿತರಾದವರು) –**

೯೩ (೮೮೮) ಸಾರಿಗೆ ಮತ್ತು ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ೨೦೨೨–೨೩ ರಿಂದ ೨೦೨೪–೨೫ರವರೆಗೆ ಡಿಪ್ಲೋಮೋ ಆಟೋಮೊಬೈಲ್ ಪದವಿಯನ್ನು ದಿ ಆಕ್ಸ್‌ಫರ್ಡ್ ಪಾಲಿಟೆಕ್ನಿಕ್ ಕಾಲೇಜಿನಲ್ಲಿ ವ್ಯಾಸಂಗ ಮಾಡಲು NOC ಪಡೆದಿರುವ ಲಿಪಿಕ ನೌಕರರ ಹೆಸರು, NOC ಪ್ರತಿಗಳು ಹಾಗೂ ಆ ಸಮಯದಲ್ಲಿ ಅಲಂಕರಿಸಿದ ಹುದ್ದೆ ಹಾಗೂ ಪ್ರಸ್ತುತ ಕರ್ತವ್ಯ ಸ್ಥಳದ ಮಾಹಿತಿ ನೀಡುವುದು ; (ವರ್ಷವಾರು ಪ್ರತ್ಯೇಕ ಮಾಹಿತಿ ನೀಡುವುದು)

(ಆ) ಸದರಿ ಸಿಬ್ಬಂದಿಗಳು ಕಾಲೇಜಿಗೆ ಪ್ರವೇಶ ಪಡೆದ ವರ್ಷ ಮತ್ತು ಪದವಿ ಪೂರ್ಣಗೊಳಿಸಿದ ವರ್ಷದ ನೌಕರರ ಮಾಹಿತಿಯನ್ನು ಒದಗಿಸುವುದು ;

(ಇ) ನಕಲಿ ಸೇವಾನುಭವ ಪ್ರಮಾಣ ಪತ್ರದ ಮೇಲೆ ಬಂದಿರುವ ದೂರಿನ ಕುರಿತು ನಿರ್ದೇಶಕರು ತಾಂತ್ರಿಕ ಶಿಕ್ಷಣ ಇಲಾಖೆ ತನಿಖೆ ನಡೆಸಿ ಸಾರಿಗೆ ಆಯುಕ್ತರಿಗೆ ನೀಡಿರುವ ವರದಿಯ ಪ್ರತಿ ಮತ್ತು ಅಡಕಗಳ ಮತ್ತು ಪುಟಗಳ ಸಂಪೂರ್ಣ ವಿವರ ನೀಡುವುದು ;

(ಈ) ಹಲವು ಗ್ರೂಪ್ ಸಿ ಲಿಪಿಕ ಸಾರಿಗೆ ನೌಕರರು ಸಾರಿಗೆ ಆಯುಕ್ತರಿಂದ ಪಡೆದ NOCಗಳನ್ನು ಪ್ರವೇಶಕ್ಕೆ ಸಲ್ಲಿಸದೇ ಖಾಯಂ ನಕಲು ಸೇವಾನುಭವಪತ್ರ (ಆಟೋಮೊಬೈಲ್ ಇಂಡಸ್ಟ್ರಿ) ಹಾಗೂ ಖಾಯಂ ನಕಲು NOC ನೀಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಸರ್ಕಾರ ಕೈಗೊಂಡ ಕ್ರಮವೇನು ?

## ಭಾರತ್ ವಾಣಿಜ್ಯ ಈಸ್ಟರ್ನ್ ಪ್ರೈವೇಟ್ ಲಿಮಿಟೆಡ್ ಸಂಸ್ಥೆಗೆ ಟೆಂಡರ್ ನೀಡಿರುವ ಕುರಿತು

**ಶ್ರೀ ಎನ್. ರವಿಕುಮಾರ್ (ವಿಧಾನಸಭೆಯಿಂದ ಚುನಾಯಿತರಾದವರು) –**

೯೪ (೮೪೯) ಲೋಕೋಪಯೋಗಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಳೆದ ಮೂರು ವರ್ಷಗಳಲ್ಲಿ ಪಶ್ಚಿಮ ಬಂಗಾಳ ಮೂಲದ ಭಾರತ್ ವಾಣಿಜ್ಯ ಈಸ್ಟರ್ನ್ ಪ್ರೈವೇಟ್ ಲಿಮಿಟೆಡ್ ಸಂಸ್ಥೆಗೆ (BVEPL) ಯಾವ ಯಾವ ಟೆಂಡರ್‌ಗಳನ್ನು ನೀಡಲಾಗಿದೆ ; ಟೆಂಡರ್ ಮೊತ್ತ, ಕಾಮಗಾರಿ ಹೆಸರು, ಪ್ರಸ್ತುತ ಚಾಲನೆಯಲ್ಲಿರುವ ಕಾಮಗಾರಿಯ ವಿವರ, ಮುಕ್ತಾಯಗೊಂಡ ಕಾಮಗಾರಿಯ ವಿವರ, ಇನ್ನೂ ಪ್ರಾರಂಭವಾಗಬೇಕಾಗಿರುವ ಕಾಮಗಾರಿಯ ವಿವರದೊಂದಿಗೆ ಸಮಗ್ರ ಮಾಹಿತಿ ನೀಡುವುದು ;

(ಆ) ಪಶ್ಚಿಮ ಬಂಗಾಳ ಮೂಲದ (BVEPL) ಭಾರತ್ ವಾಣಿಜ್ಯ ಈಸ್ಟರ್ನ್ ಪ್ರೈವೇಟ್ ಲಿಮಿಟೆಡ್ ಸಂಸ್ಥೆಗೆ ೮೨೮.೪೬ ಕೋಟಿ ಟೆಂಡರ್ ಸೇರಿದಂತೆ ೧೦೦೦೦ ಕೋಟಿಗೂ ಅಧಿಕ ಮೊತ್ತದ ೩ ರಸ್ತೆ ನಿರ್ಮಾಣ ಟೆಂಡರ್‌ಗಳನ್ನು ನೀಡಿರುವುದು ನಿಜವೇ ; ಟೆಂಡರ್ ಅಂಗೀಕರಿಸಲು ನಿಗದಿಪಡಿಸಲಾಗಿರುವ ಮಾನದಂಡಗಳಾವುವು ?

## ಮಾಜಿ ಸೈನಿಕರಿಗೆ ನಿವೇಶನಗಳನ್ನು ಹಂಚಿಕೆ ಮಾಡದಿರುವ ಬಗ್ಗೆ

**ಶ್ರೀ ಡಿ.ಟಿ. ಶ್ರೀನಿವಾಸ್ (ಡಿ.ಟಿ.ಎಸ್) (ಶಿಕ್ಷಕರ ಕ್ಷೇತ್ರ) –**

೯೫ (೮೯೨) ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಯಲಹಂಕ ತಾಲ್ಲೂಕಿನ ಗಂಟಿಗಾನಹಳ್ಳಿಯ ಸರ್ವೇ ನಂಬರ್ ೧೬, ೧೭ ಮತ್ತು ೧೯ರಲ್ಲಿ ಮಾಜಿ ಸೈನಿಕರ ಕುಟುಂಬಗಳಿಗೆ ವಿಶೇಷ ಆಶ್ರಯ ಯೋಜನೆಯಡಿ ನಿವೇಶನ ನಿರ್ಮಾಣ ಮಂಜೂರು ಮಾಡಲು ೧೫ ಎಕರೆ ೧೬ ಗುಂಟೆ ಮಂಜೂರು ಮಾಡಿ ಹಸ್ತಾಂತರಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಈ ಸರ್ವೆ ನಂಬರ್ ೧೬, ೧೭ ಮತ್ತು ೧೯ ಜಮೀನುಗಳಲ್ಲಿ ನಿವೇಶನಗಳನ್ನು ನಿರ್ಮಿಸಲು ಯಾವ ಕ್ರಮಗಳನ್ನು ಜರುಗಿಸಲಾಗಿದೆ ; ಪ್ರಸ್ತುತ ಯಾವ ಹಂತದಲ್ಲಿದೆ ;

(ಇ) ಎಷ್ಟು ನಿವೇಶನಗಳನ್ನು ಇದುವರೆಗೆ ನಿರ್ಮಿಸಲಾಗಿದೆ ; ಅದರಲ್ಲಿ ಎಷ್ಟು ನಿವೇಶನಗಳನ್ನು ಮಾಜಿ ಸೈನಿಕರ ಕುಟುಂಬಗಳಿಗೆ ವಿತರಿಸಲಾಗಿದೆ ; ವಿತರಿಸದೆ ಇದ್ದಲ್ಲಿ, ಕಾರಣಗಳೇನು ;

(ಈ) ಸರ್ಕಾರ ಮಂಜೂರು ಮಾಡಿರುವ ಜಮೀನಿನಲ್ಲಿ ಮಾಜಿ ಸೈನಿಕರ ಕುಟುಂಬಗಳಿಗೆ ನಿವೇಶನ ನಿರ್ಮಿಸಿ ನೀಡದೆ ಇರುವ ಅಡಚಣೆಗಳೇನು ;

(ಉ) ಈ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ತೆಗೆದುಕೊಂಡ ಕ್ರಮಗಳೇನು ;

(ಊ) ನಿವೇಶನಗಳನ್ನು ನಿರ್ಮಾಣ ಮಾಡಿ ಹಂಚಿಕೆ ಮಾಡದೇ ಇರುವ ಅಧಿಕಾರಿಗಳ ವಿರುದ್ಧ ಸರ್ಕಾರ ತೆಗೆದುಕೊಂಡಿರುವ ಶಿಸ್ತು ಕ್ರಮಗಳೇನು ?

## ಖಾಲಿ ಇರುವ ಬಂದರು ಅಧಿಕಾರಿ ಹುದ್ದೆಗಳ ಬಗ್ಗೆ

**ಶ್ರೀ ಗಣಪತಿ ದುಮ್ಮಾ ಉಳ್ವೇಕರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೯೬ (೮೮೯) ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕರ್ನಾಟಕ ಜಲಸಾರಿಗೆ ಮಂಡಳಿಯಲ್ಲಿ ಇರುವ ಒಟ್ಟು ಬಂದರು ಅಧಿಕಾರಿ ಹುದ್ದೆಗಳು ಎಷ್ಟು ; ಖಾಲಿ ಇರುವ ಮತ್ತು ಭರ್ತಿ ಮಾಡಿರುವ ಹುದ್ದೆಗಳು ಎಷ್ಟು ; (ವಿವರ ನೀಡುವುದು)

(ಆ) ಬಂದರು ಅಧಿಕಾರಿ ಹುದ್ದೆ ಖಾಲಿ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಭರ್ತಿ ಮಾಡಲು ತೆಗೆದುಕೊಂಡಿರುವ ಕ್ರಮಗಳೇನು ;

(ಇ) ಬಂದರು ಅಧಿಕಾರಿ ಹುದ್ದೆಯನ್ನು ಭರ್ತಿ ಮಾಡಲು ಇರುವ ಮಾನದಂಡಗಳೇನು ;

(ಈ) ರಾಜ್ಯದ ಯಾವ ಯಾವ ಬಂದರುಗಳಲ್ಲಿ ಬಂದರು ಅಧಿಕಾರಿ ಹುದ್ದೆಯನ್ನು ಮಾನದಂಡಗಳ ಪ್ರಕಾರ ಭರ್ತಿ ಮಾಡಲಾಗಿದೆ ; (ಸಂಪೂರ್ಣ ವಿವರ ನೀಡುವುದು)

(ಉ) ಕಳೆದ ೫ ವರ್ಷಗಳಿಂದ ತೇಲು ಜೆಟ್ಟಿಗೆ ಮಾಡಿರುವ ವೆಚ್ಚ ಎಷ್ಟು ; (ಜಿಲ್ಲಾವಾರು ಮಾಹಿತಿ ನೀಡುವುದು)

(ಊ) ಉತ್ತರ ಕನ್ನಡ ಜಿಲ್ಲೆಯಲ್ಲಿ ಎಲ್ಲೆಲ್ಲಿ ತೇಲು ಜೆಟ್ಟಿಗಳನ್ನು ನಿರ್ಮಿಸಲಾಗಿದೆ ? (ಸಂಪೂರ್ಣ ವಿವರ ನೀಡುವುದು)

## ಜಮೀನುಗಳನ್ನು ಭೂಸ್ವಾಧೀನ ಮಾಡಿಕೊಳ್ಳುವ ಮಾರ್ಗಸೂಚಿ ಮೌಲ್ಯಗಳ ಬಗ್ಗೆ

**ಶ್ರೀ ಕೆ.ಎಸ್. ನವೀನ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೯೭ (೯೫೫) ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯ ಸರ್ಕಾರವು ೨೦೨೩ ರಲ್ಲಿ ಜಮೀನುಗಳ ಮಾರ್ಗಸೂಚಿ ಮೌಲ್ಯವನ್ನು (Guideline Value) ಹೆಚ್ಚಿಸಲಾಗಿದೆಯೇ ;

(ಆ) ಭೂಸ್ವಾಧೀನ ಮಾಡುವ ಸಂದರ್ಭಗಳಲ್ಲಿ ೨೦೨೩ ರಲ್ಲಿ ಹೆಚ್ಚಿಸಿದ ಮಾರ್ಗಸೂಚಿ ಮೌಲ್ಯವನ್ನು ಪರಿಗಣಿಸದೇ ೨೦೧೯ರ ಮಾರ್ಗಸೂಚಿ

ಮೌಲ್ಯವನ್ನು ಆಧಾರವಾಗಿಸಿಕೊಂಡು ಪರಿಹಾರ ನಿಗದಿ ಮಾಡುತ್ತಿರುವುದು ನಿಜವೇ ;

(ಇ) ೨೦೨೩ರ ಮಾರ್ಗಸೂಚಿ ಮೌಲ್ಯ ಹೆಚ್ಚಳ ಜಾರಿಗೆ ಬಂದಿದ್ದರೂ ೨೦೧೯ರ ಮೌಲ್ಯವನ್ನು ಅನ್ವಯಿಸುವುದಕ್ಕೆ ಸರ್ಕಾರದ ಸ್ಪಷ್ಟವಾದ ಕಾರಣವೇನು ; ಇದರಿಂದ ರೈತರಿಗೆ ಆರ್ಥಿಕ ನಷ್ಟ ಉಂಟಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಈ) ಮುಂದಿನ ದಿನಗಳಲ್ಲಿ ಭೂಸ್ವಾಧೀನ ಪ್ರಕರಣಗಳಲ್ಲಿ ಪ್ರಸ್ತುತ ಜಾರಿಯಲ್ಲಿರುವ ಮಾರ್ಗಸೂಚಿ ಮೌಲ್ಯವನ್ನೇ ಆಧಾರವಾಗಿ ಪರಿಗಣಿಸಿ ನ್ಯಾಯಸಮ್ಮತ ಪರಿಹಾರ ನೀಡಲು ಕ್ರಮ ಕೈಗೊಳ್ಳುವ ಯೋಜನೆ ಸರ್ಕಾರದ ಮುಂದಿದೆಯೇ ?

## ಧಾರವಾಡದಲ್ಲಿ ಮುಜರಾಯಿ ಇಲಾಖೆಯಡಿ ಬರುವ ದೇವಸ್ಥಾನಗಳ ಅಭಿವೃದ್ಧಿ ಕಾರ್ಯದ ಬಗ್ಗೆ

**ಶ್ರೀ ಪ್ರದೀಪ್ ಶೆಟ್ಟರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೧೮ (೧೫೬) ಸಾರಿಗೆ ಮತ್ತು ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಧಾರವಾಡ ನಗರ ಪ್ರದೇಶದಲ್ಲಿ ಮುಜರಾಯಿ ಇಲಾಖೆಯಡಿ ಬರುವ ದೇವಸ್ಥಾನಗಳ ಸಂಖ್ಯೆ ಎಷ್ಟು ;

(ಆ) ಹುಬ್ಬಳ್ಳಿ ಸೆಂಟ್ರಲ್ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯ ಮುಜರಾಯಿ ಇಲಾಖೆಯಡಿ ಬರುವ ದೇವಸ್ಥಾನಗಳ ಸಂಖ್ಯೆ ಎಷ್ಟು ಹಾಗೂ ಸದರಿ ದೇವಸ್ಥಾನಗಳ ಅಭಿವೃದ್ಧಿ ಕಾರ್ಯಗಳಿಗೆ ಮಂಜೂರು ಮಾಡಲಾಗಿರುವ ಅನುದಾನವೆಷ್ಟು ;

(ಇ) ಹುಬ್ಬಳ್ಳಿಯ ಉಣಕಲ್‌ನಲ್ಲಿ ಬರುವ ಐತಿಹಾಸಿಕ ಚಂದ್ರಮೌಳೇಶ್ವರ ದೇವಸ್ಥಾನದ ಅಭಿವೃದ್ಧಿಗೆ ಬಿಡುಗಡೆ ಮಾಡಲಾಗಿರುವ ಅನುದಾನ ಎಷ್ಟು ಹಾಗೂ ಅಭಿವೃದ್ಧಿ ಕಾರ್ಯದ ಪ್ರಸ್ತುತ ಪ್ರಗತಿಯ ಸ್ಥಿತಿ ಏನು ?

## ಸರ್ಕಾರಿ ಪಶು ಆಸ್ಪತ್ರೆಗಳು ಹಾಗೂ ಸಿಬ್ಬಂದಿಗಳ ಬಗ್ಗೆ

**ಶ್ರೀ ಡಿ.ಎಸ್. ಅರುಣ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

**ಶ್ರೀಮತಿ ಹೇಮಲತಾ ನಾಯಕ್ (ವಿಧಾನಸಭೆಯಿಂದ ಚುನಾಯಿತರಾದವರು) –**

**ಶ್ರೀ ಎಸ್.ವ್ಹಿ. ಸಂಕನೂರ (ಪದವೀಧರರ ಕ್ಷೇತ್ರ) –**

೯೯ (೯೩೭+೯೫೧+೯೭೨) ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ/ಕಲ್ಯಾಣ ಕರ್ನಾಟಕ ಭಾಗದಲ್ಲಿ ಸರ್ಕಾರಿ ಪಶುವೈದ್ಯ ಆಸ್ಪತ್ರೆಗಳು, ಪಶು ಚಿಕಿತ್ಸಾಲಯಗಳು ಹಾಗೂ ಮೊಬೈಲ್ ವೆಟರಿನರಿ ಘಟಕಗಳಲ್ಲಿ ಪಶುವೈದ್ಯರು, ಪಶು ನಿರೀಕ್ಷಕರು ಹಾಗೂ ಸಹಾಯಕ ಸಿಬ್ಬಂದಿಗಳ ಅಧಿಕೃತ ಹುದ್ದೆಗಳು ಎಷ್ಟು ; ಪ್ರಸ್ತುತ ಖಾಲಿ ಇರುವ ಹುದ್ದೆಗಳು ಎಷ್ಟು ; (ಜಿಲ್ಲಾವಾರು ಮಾಹಿತಿ ನೀಡುವುದು)

(ಆ) ಕಳೆದ ೩ ವರ್ಷಗಳಲ್ಲಿ ಪಶುಸಂಗೋಪನೆ ಇಲಾಖೆಯಲ್ಲಿ ಎಷ್ಟು ಪಶು ವೈದ್ಯರನ್ನು ನೇಮಕ ಮಾಡಲಾಗಿದೆ ; ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರ ಕೈಗೊಂಡ ಕ್ರಮಗಳೇನು ;

(ಇ) ರಾಜ್ಯದಲ್ಲಿ ಎಷ್ಟು ಪಶುವೈದ್ಯ ಆಸ್ಪತ್ರೆಗಳು ಮತ್ತು ಪ್ರಾಥಮಿಕ ಪಶು ಕೇಂದ್ರಗಳು ಪಶುವೈದ್ಯರಿಲ್ಲದೆ ಕಾರ್ಯನಿರ್ವಹಿಸುತ್ತಿವೆ ; (ಜಿಲ್ಲಾವಾರು ಮಾಹಿತಿ ನೀಡುವುದು)

(ಈ) ರೈತರು ಹಾಗೂ ಪಶುಸಂಗೋಪಕರ ಸಮಸ್ಯೆ ಮತ್ತು ಪಶು ವೈದ್ಯರ ಕೊರತೆಯಿಂದಾಗಿ ಪಶು ರೋಗ ನಿಯಂತ್ರಣ, ಲಸಿಕಾ ಕಾರ್ಯಕ್ರಮ, ಹಾಲು ಉತ್ಪಾದನೆ ಹಾಗೂ ರೈತರ ಆದಾಯದ ಮೇಲೆ ಉಂಟಾಗಿರುವ ಪರಿಣಾಮದ ಬಗ್ಗೆ ಸರ್ಕಾರ ಅಧ್ಯಯನ ನಡೆಸಿದೆಯೇ ? (ವಿವರ ನೀಡುವುದು)

## ಕರ್ನಾಟಕ ರಾಜ್ಯದಲ್ಲಿ ಭೂ ಮಂಜೂರಾತಿ ಕುರಿತು

**ಶ್ರೀ ಮಂಜುನಾಥ್ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೧೦೦ (೯೭೨) ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಗ್ರಾಮ ಪಂಚಾಯಿತಿಗಳು ಹಾಗೂ ವಿವಿಧ ಇಲಾಖೆಗಳ ಮೂಲಕ ಕರ್ನಾಟಕ ಭೂ ಮಂಜೂರಾತಿ ನಿಯಮಗಳು, ೧೯೬೯ರ ನಿಯಮ ೨೨–ಎ (೩)(೧) ರಡಿ ಭೂ ಮಂಜೂರಾತಿಗಾಗಿ ಸ್ವೀಕರಿಸಲಾದ ಒಟ್ಟು ಅರ್ಜಿಗಳೆಷ್ಟು ; ಆಯಾಯ ಇಲಾಖೆಗಳಿಗೆ ಮಂಜೂರಾತಿಯಾದ ಪ್ರಕರಣಗಳೆಷ್ಟು ; ಇವುಗಳನ್ನು ಪಹಣಿಯ ಯಾವ ಕಾಲಂಗಳಲ್ಲಿ ದಾಖಲಿಸಿದೆ ;

(ಆ) ಭೂ ಮಂಜೂರಾತಿಗಾಗಿ ಸಲ್ಲಿಕೆಯಾದ ಎಲ್ಲಾ ರೀತಿಯ ಒಟ್ಟು ಅರ್ಜಿಗಳಲ್ಲಿ ಬಾಕಿಯಿರುವ ಅರ್ಜಿಗಳೆಷ್ಟು ; ಈ ಅರ್ಜಿಗಳು ಸಲ್ಲಿಕೆಯಾದ ದಿನಾಂಕ, ಅರ್ಜಿಯ ಅರ್ಹತೆಯ ಆಧಾರದ ವರ್ಗೀಕರಣ, ಅರ್ಜಿಯ ಪ್ರಸ್ತುತ ಸ್ಥಿತಿ, ಕ್ರಮವಹಿಸಬೇಕಾದ ಕಛೇರಿ/ಸಿಬ್ಬಂದಿ, ಬಾಕಿಯಿರಲು ಕಾರಣ, ವಿಲೇವಾರಿ ಮಾಡಬಹುದಾದ ಸಂಭಾವ್ಯ ದಿನಾಂಕ ಹಾಗೂ ಇನ್ನಿತರ ಸ್ಪಷ್ಟ ಮಾಹಿತಿ ಜಿಲ್ಲಾ, ಉಪವಿಭಾಗ ಮತ್ತು ತಾಲ್ಲೂಕು ಮಟ್ಟದ ಕಂದಾಯ ಕಛೇರಿಯಲ್ಲಿ ಲಭ್ಯವಿದೆಯೇ ; ಇದ್ದಲ್ಲಿ, ವಿವರ ನೀಡುವುದು ;

(ಇ) ಕರ್ನಾಟಕ ಭೂ ಕಂದಾಯ ಕಾಯ್ದೆ, ೧೯೬೪ರ ಕಲಂ ೭೧ರ ಅನ್ವಯ ಆಯಾಯ ಇಲಾಖೆಗಳಿಗೆ ಕಾಯ್ದಿರಿಸಲಾದ ಜಾಗಗಳ ಮಾಹಿತಿಯನ್ನು ಆರ್‌ಟಿಸಿ (RTC)ಯ ಕಾಲಂನಲ್ಲಿ ದಾಖಲಿಸಬೇಕಾಗಿದೆ ; ಪಹಣಿಯ ಯಾವ ಕಾಲಂನಲ್ಲಿ ದಾಖಲಿಸಿದರೆ ಮಂಜೂರಾದ ಭೂಮಿಯ ಮೇಲೆ ಪೂರ್ಣ ಅಧಿಕಾರ ಮಂಜೂರಾದ ಇಲಾಖೆ/ವ್ಯಕ್ತಿ ಹೊಂದಿರುತ್ತಾರೆ ;

ಈ) ಯಾವುದೇ ಸರ್ಕಾರಿ ಜಾಗ ಮಂಜೂರಾದಾಗ ಪಹಣಿಯಲ್ಲಿ ದಾಖಲಿಸುವ ಕಾಲಂನಲ್ಲಿ ನಿರ್ಧರಿಸುವ ಮತ್ತು ದಾಖಲಿಸುವ ಜವಾಬ್ದಾರಿ ಯಾವ ಅಧಿಕಾರಿ/ಸಿಬ್ಬಂದಿ ಹೊಂದಿರುತ್ತಾರೆ ; ಈ ಕುರಿತು ನಿಗದಿಪಡಿಸಿರುವ ಕಾಲಮಿತಿ ಎಷ್ಟು ;

ಉ) ಇಲಾಖೆಗಳಿಗೆ ಜಾಗ ಮಂಜೂರಾದ ಪ್ರಕರಣಗಳ ಪೈಕಿ ಯಾವ್ಯಾವ ಇಲಾಖೆಗಳ ಮಾಹಿತಿಯನ್ನು ಆರ್‌ಟಿಸಿಯ ಸಂಬಂಧಪಟ್ಟ ಕಾಲಂಗಳಲ್ಲಿ

ದಾಖಲಿಸಲು ಕ್ರಮ ವಹಿಸಲಾಗಿದೆ ; ದಾಖಲಿಸಲು ಬಾಕಿಯಿರುವ ಪ್ರಕರಣಗಳೆಷ್ಟು ; ಬಾಕಿಯಿರುವ ಪ್ರಕರಣಗಳಲ್ಲಿ ಯಾವ ಕಾಲಮಿತಿಯೊಳಗೆ ದಾಖಲಿಸಲು ಕ್ರಮವಹಿಸಲಾಗುವುದು ?

## ಕರಾವಳಿ ಭಾಗದ ಪ್ರಮುಖ ಸೇತುವೆಗಳ ಬಗ್ಗೆ

**ಶ್ರೀ ಐವನ್ ಡಿ'ಸೋಜಾ (ವಿಧಾನಸಭೆಯಿಂದ ಚುನಾಯಿತರಾದವರು) –**

೧೦೧ (೯೩೦) ಲೋಕೋಪಯೋಗಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕರಾವಳಿ ಭಾಗದ ಪ್ರಮುಖ ಸೇತುವೆಗಳು ಸಂಚಾರಕ್ಕೆ ಯೋಗ್ಯವಾಗಿಲ್ಲ ಎಂಬ ವರದಿಗಳು ಬಂದಿರುವುದು ನಿಜವೇ ; ಇಲಾಖೆ ಇಂತಹ ಎಷ್ಟು ಸೇತುವೆಗಳನ್ನು ಗುರುತಿಸಿದೆ ; (ವಿವರ ನೀಡುವುದು)

(ಆ) ಅತಿಯಾದ ಮಳೆ ನೀರು ಮತ್ತು ಸೇತುವೆ ಕೆಳಭಾಗದಲ್ಲಿ ಮರಳನ್ನು ತೆಗೆಯುತ್ತಿರುವುದರಿಂದ ಸೇತುವೆಗಳು ಕುಸಿದಿದ್ದು ವಾಹನ ಸಂಚಾರಕ್ಕೆ ಯೋಗ್ಯವಲ್ಲ ಎಂಬ ವರದಿಗಳಿದ್ದು, ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು ;

(ಇ) ಯಾವ ಯಾವ ಸೇತುವೆಗಳ ಪುನರ್ ನಿರ್ಮಾಣಕ್ಕೆ ಮತ್ತು ದುರಸ್ತಿಗೆ ಸರ್ಕಾರದ ಮುಂದೆ ಯೋಜನೆಗಳಿವೆ ; (ವಿವರ ನೀಡುವುದು)

(ಈ) ರಾಜ್ಯದಲ್ಲಿ ಸೇತುವೆಗಳ ಪುನರ್ ನಿರ್ಮಾಣಕ್ಕೆ/ದುರಸ್ತಿಗೆ ಮೀಸಲಿಟ್ಟ ಅನುದಾನ ಎಷ್ಟು ; (ವಿವರ ನೀಡುವುದು)

(ಉ) ದಕ್ಷಿಣ ಕನ್ನಡ ಜಿಲ್ಲೆಯ ಶಿರಾಡಿಘಾಟ್ (ಟನಲ್ ರೋಡ್) ನಿರ್ಮಾಣ ಮಾಡಬೇಕೆಂಬ ಪ್ರಸ್ತಾವನೆ ಯಾವ ಹಂತದಲ್ಲಿದೆ ; ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮವೇನು ;

(ಊ) ಕರಾವಳಿ ಭಾಗದಲ್ಲಿ ಎಷ್ಟು ಫ್ಲೈ ಓವರ್ ಗುಣಮಟ್ಟ ಕಳಪೆಮಟ್ಟದ್ದಾಗಿದೆ ಹಾಗೂ ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು ? (ವಿವರ ನೀಡುವುದು)

# ಲೋಕೋಪಯೋಗಿ ಇಲಾಖೆಯಿಂದ ರಸ್ತೆ ಅಭಿವೃದ್ಧಿಪಡಿಸಿರುವ ಬಗ್ಗೆ

**ಶ್ರೀ ಎಂ.ಎಲ್. ಅನಿಲ್ ಕುಮಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೧೦೨ (೮೬೦) ಲೋಕೋಪಯೋಗಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕರ್ನಾಟಕ ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆಯಡಿಯಲ್ಲಿ (KSHIP) ೨೦೨೪ರಿಂದ ಈವರೆಗೂ ಕೋಲಾರ ಜಿಲ್ಲೆಗೆ ಹಾಗೂ ಕೋಲಾರ ಜಿಲ್ಲೆಗೆ ಹೊಂದಿಕೊಳ್ಳುವ ರಸ್ತೆಯ (Connecting Roads) ಯಾವ ಯಾವ ರಸ್ತೆ ಕಾಮಗಾರಿಗಳ ಯೋಜನೆಯನ್ನು ರೂಪಿಸಲಾಗಿದೆ ; ಪ್ರತಿ ಕಾಮಗಾರಿಯ ವೆಚ್ಚವೆಷ್ಟು ; ಕಾಮಗಾರಿಗಳು ಯಾವ ಹಂತದಲ್ಲಿದೆ ; (ಸಂಪೂರ್ಣವಾದ ಮಾಹಿತಿ ನೀಡುವುದು)

(ಆ) ವೇಮಗಲ್‌ನಿಂದ ತಮಿಳುನಾಡು ಗಡಿಯ ಕಿ.ಮೀ. ೩೬.೫೮೬ವರೆಗಿನ ಉದ್ದಕ್ಕೆ ಪಿಪಿಪಿ–ಡಿಬಿಎಫ್‌ಒಎಂಟಿ–ಹೈಬ್ರಿಡ್ ಆನ್ಯೂಟಿ ಅಡಿಯಲ್ಲಿ ರಸ್ತೆ ಅಭಿವೃದ್ಧಿಪಡಿಸುವ ಕಾಮಗಾರಿಯು ಯಾವ ಹಂತದಲ್ಲಿದೆ ; (ಸಂಪೂರ್ಣವಾದ ಮಾಹಿತಿ ನೀಡುವುದು)

(ಇ) ಕರ್ನಾಟಕ ರಾಜ್ಯದಲ್ಲಿ ಹೊಸಕೋಟೆಯಿಂದ ಮಾಲೂರುವರೆಗೆ ಹಾಗೂ ಮಾಲೂರು ಎಲಿವೇಟೆಡ್ ಕಾರಿಡಾರ್‌ನ ಮಾಲೂರು ಕೈಗಾರಿಕಾ ಪ್ರದೇಶದ ಕಿ.ಮೀ ೨೫.೬೧೫ವರೆಗೆ ಉದ್ದಕ್ಕೆ ಪಿಪಿಪಿ–ಡಿಬಿಎಫ್‌ಒಎಂಟಿ–ಹೈಬ್ರಿಡ್ ಆನ್ಯೂಟಿ ಅಡಿಯಲ್ಲಿ ರಸ್ತೆ ಅಭಿವೃದ್ಧಿಪಡಿಸುವ ಕಾಮಗಾರಿಯು ಯಾವ ಹಂತದಲ್ಲಿದೆ ; (ಸಂಪೂರ್ಣವಾದ ಮಾಹಿತಿ ನೀಡುವುದು)

(ಈ) ದೇವನಹಳ್ಳಿ–ವೇಮಗಲ್–ಕೋಲಾರ ಕಿ.ಮೀ ೪೯.೨೮೪ರವರೆಗೆ ಉದ್ದಕ್ಕೆ ಪಿಪಿಪಿ–ಡಿಬಿಎಫ್‌ಒಎಂಟಿ–ಹೈಬ್ರಿಡ್ ಆನ್ಯೂಟಿ ಅಡಿಯಲ್ಲಿ ರಸ್ತೆಯ ಕಾಮಗಾರಿಯು ಯಾವ ಹಂತದಲ್ಲಿದೆ ? (ಸಂಪೂರ್ಣವಾದ ಮಾಹಿತಿ ನೀಡುವುದು)

## ತುಮಕೂರು–ಶಿವಮೊಗ್ಗ ಹೆದ್ದಾರಿ ಕುರಿತು

**ಶ್ರೀಮತಿ ಬಲ್ಕೀಸ್ ಬಾನು (ವಿಧಾನಸಭೆಯಿಂದ ಚುನಾಯಿತರಾದವರು) –**

೧೦೩ (೯೮೪) ಲೋಕೋಪಯೋಗಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ತುಮಕೂರು–ಶಿವಮೊಗ್ಗ ಚತುಷ್ಪಥ ಹೆದ್ದಾರಿ ಕಾಮಗಾರಿ ಯಾವಾಗ ಪ್ರಾರಂಭವಾಯಿತು ; ಕಾಮಗಾರಿ ಪೂರ್ಣಗೊಳ್ಳದಿರಲು ಕಾರಣವೇನು ;

(ಆ) ಈ ಕಾಮಗಾರಿಗೆ ಕೇಂದ್ರ ಸರ್ಕಾರದ ಪಾಲು ಎಷ್ಟು ಹಾಗೂ ರಾಜ್ಯ ಸರ್ಕಾರದ ಪಾಲು ಎಷ್ಟು ;

(ಇ) ಈ ಯೋಜನೆಗೆ ಸಂಬಂಧಿಸಿದಂತೆ ಭೂಸ್ವಾಧೀನ ಪ್ರಕ್ರಿಯೆ ಪೂರ್ಣಗೊಂಡಿದೆಯೇ ಅಥವಾ ಭೂಸ್ವಾಧೀನ ಪ್ರಕ್ರಿಯೆ ಇನ್ನೂ ಬಾಕಿ ಇದೆಯೇ ;

(ಈ) ಈಗಾಗಲೇ ಭೂಸ್ವಾಧೀನ ಪಡಿಸಿಕೊಂಡಿರುವ ರೈತರಿಗೆ ನೀಡಿರುವ ಪರಿಹಾರ ಹಣದ ಮೊತ್ತವೆಷ್ಟು ; ಇನ್ನೂ ಬಾಕಿ ನೀಡಬೇಕಾದ ಪರಿಹಾರದ ಮೊತ್ತ ಎಷ್ಟು ;

(ಉ) ಈ ಕಾಮಗಾರಿಯನ್ನು ಪೂರ್ಣಗೊಳಿಸಲು ಬೇಕಾಗಿರುವ ಕಾಲಾವಧಿ ಎಷ್ಟು ?

## ರಾಜ್ಯದಲ್ಲಿನ ಮುಸಲ್ಮಾನ ಅಲ್ಪಸಂಖ್ಯಾತರ ಶೈಕ್ಷಣಿಕ ಮತ್ತು ಸಾಮಾಜಿಕ ಸ್ಥಿತಿಗತಿಗಳ ಬಗ್ಗೆ

**ಶ್ರೀ ಶಿವಕುಮಾರ್ ಕೆ. (ನಾಮನಿರ್ದೇಶನ ಹೊಂದಿದವರು) –**

೧೦೪ (೮೭೮) ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ೧೯೯೫, ೨೦೦೦ ಮತ್ತು ೨೦೨೫ರ ಅಂದಾಜಿನ ಪ್ರಕಾರ ಮುಸಲ್ಮಾನ ಅಲ್ಪಸಂಖ್ಯಾತರ ಜನಸಂಖ್ಯೆ ಮತ್ತು ಅಕ್ಷರಸ್ಥರ (Literacy Rate) ಪ್ರಮಾಣ ಎಷ್ಟು ; (ವರ್ಷವಾರು ವಿವರ ನೀಡುವುದು)

(ಆ) ಈ ಸಮುದಾಯದಲ್ಲಿ ಶಾಲಾ ಶಿಕ್ಷಣ (Primary & Secondary) ಮತ್ತು ಉನ್ನತ ಶಿಕ್ಷಣವನ್ನು (Higher Education) ಪೂರೈಸಿದವರ ಶೇಕಡಾವಾರು ಪ್ರಮಾಣ ಎಷ್ಟು ; ಸಮುದಾಯವು ಶೈಕ್ಷಣಿಕವಾಗಿ ಹಿಂದುಳಿಯಲು ಪ್ರಮುಖ ಕಾರಣಗಳೇನು ;

(ಇ) ಮುಸಲ್ಮಾನರ ಸ್ಥಿತಿಗತಿ ಸುಧಾರಿಸಲು ರಚಿಸಲಾಗಿದ್ದ ರಾಜೇಂದ್ರ ಸಚಾರ್ ಸಮಿತಿ, ರೆಹಮಾನ್ ಖಾನ್ ಸಮಿತಿ ಮತ್ತು ಅಜಿತ್ ಸೇಠ್ ಸಮಿತಿಗಳ ವರದಿಯಲ್ಲಿನ ಪ್ರಮುಖ ಶಿಫಾರಸ್ಸುಗಳೇನು ; ಈ ಶಿಫಾರಸ್ಸುಗಳನ್ನು ಜಾರಿಗೆ ತರಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ;

(ಈ) ಕಳೆದ ಮೂರು ವರ್ಷಗಳಲ್ಲಿ ಇವರನ್ನು ಸಾಮಾಜಿಕವಾಗಿ ಮತ್ತು ಶೈಕ್ಷಣಿಕವಾಗಿ ಮುಖ್ಯವಾಹಿನಿಗೆ ತರಲು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯಿಂದ ಹಂಚಿಕೆಯಾದ ಅನುದಾನ ಮತ್ತು ವ್ಯಯಿಸಲಾದ ಮೊತ್ತ ಎಷ್ಟು ; ಹೊಸದಾಗಿ ರೂಪಿಸಲಾದ ಯೋಜನೆಗಳಾವುವು ?

## ಬೆಂಗಳೂರು ನಗರ ಜಿಲ್ಲೆಯ ಕಂದಾಯ ಭೂಮಿಗಳಲ್ಲಿ ನಿರ್ಮಿಸಲಾಗಿರುವ ಲೇಔಟ್‌ಗಳ ಕುರಿತು

**ಶ್ರೀ ಹೆಚ್.ಎಸ್. ಗೋಪಿನಾಥ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೧೦೫ (೯೮೦) ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೆಂಗಳೂರು ನಗರ ಜಿಲ್ಲೆಯ ಹಲವು ಗ್ರಾಮಗಳ ವ್ಯಾಪ್ತಿಯ ಕಂದಾಯ ಭೂಮಿಗಳಲ್ಲಿ ನಿರ್ಮಿಸಲಾಗಿರುವ ಲೇಔಟ್‌ಗಳಲ್ಲಿ ಈಗಾಗಲೇ ಮಾರಾಟವಾಗಿ ನೋಂದಣಿಯಾಗಿರುವ ನಿವೇಶನಗಳಿಗೆ ಸರ್ಕಾರವು B ಖಾತಾವನ್ನು ನೀಡಿರುವುದೇ ; ಇದೇ ಬಡಾವಣೆಗಳಲ್ಲಿ ಇನ್ನುಳಿದಿರುವ ಮತ್ತು ಇನ್ನೂ ನೋಂದಣಿಯಾಗದ ನಿವೇಶನಗಳಿಗೆ ಸರ್ಕಾರವು "ಬಿ" ಖಾತಾವನ್ನು ನೀಡದೆ ನಿರಾಕರಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಯಾವ ಕ್ರಮ ಕೈಗೊಂಡಿದೆ ; (ವಿವರ ನೀಡುವುದು)

(ಆ) ಈ ಸಮಸ್ಯೆಯಿಂದ ಸಾರ್ವಜನಿಕರಿಗೆ ತುಂಬಾ ತೊಂದರೆಯಾಗುತ್ತಿದ್ದು ಆದಷ್ಟು ಬೇಗನೆ ಸರ್ಕಾರವು ಗಂಭೀರವಾಗಿ ಪರಿಗಣಿಸಿ ಇದನ್ನು ಸರಿಪಡಿಸಲು ಯಾವ ಯಾವ ಕ್ರಮವನ್ನು ಕೈಗೊಳ್ಳುವುದು ; (ವಿವರ ನೀಡುವುದು)

(ಇ) ಸರ್ಕಾರವು ಈ ಸಮಸ್ಯೆಯನ್ನು ಯಾವ ಕಾಲಮಿತಿಯೊಳಗೆ ಬಗೆಹರಿಸುವುದು ? (ವಿವರ ನೀಡುವುದು)

**ಕೆ.ಆರ್. ಮಹಾಲಕ್ಷ್ಮಿ**
ಕಾರ್ಯದರ್ಶಿ
ಕರ್ನಾಟಕ ವಿಧಾನ ಪರಿಷತ್ತು

ಸರ್ಕಾರಿ ಮುದ್ರಣಾಲಯ, ವಿಕಾಸಸೌಧ, ಬೆಂಗಳೂರು, ಕಾ.ಸೂ./ಪಿ5

**List of Questions**
**for Oral Answers**

**Total No. of**
**Questions - 15**

# LIST - 07

# KARNATAKA LEGISLATIVE COUNCIL

## ONE HUNDRED AND FIFTY EIGHTH SESSION

## (Adjourned Meetings)

## Wednesday, the 11th March, 2026

---

**GROUP - III**

1. Minister for Transport and Muzrai
2. Minister for Public Works
3. Minister for Revenue
4. Minister for Housing, Wakf and Minority Welfare
5. Minister for Animal Husbandry and Sericulture
6. Minister for Fisheries and Ports and Inland Water Transport

---

### TOLLS OF BENGALURU NICE ROAD

**Sri. Ramojigowda (Graduates' Constituency) -**

91(882) Will the Minister for Public Works be pleased to state :-

(a) the particulars of major terms of agreement signed between the Government and the company for the project of NICE road which is situated in the outskirts of Bengaluru ; (the information of the period of agreement and the renewal be furnished)

(b) whether an approval has been obtained by the Government while fixing toll fee that is being recovered from public in NICE road ; if not, the reason thereof ;

(c) whether any committee or authority has been appointed by the Government to revise the rate of toll fee ; if so, the report thereof be furnished ;

(d) whether it has come to the notice of the Government regarding traffic jam, accidents and lack of maintenance that are being occurred frequently in NICE road ; the measures taken by the Government to resolve the problems ;

(e) the particular of system that has been implemented by the Government for monitoring and penalty measures for the maintenance of NICE road on the basis of complaints being received from public ;

(f) the steps that would be taken by the Government to bring the NICE road under control of the Government or reduce the toll fee in future ?

## CONSTRUCTION OF NITTURU-SINGAPURA BRIDGE CONNECTING TO SINDHANUR AND SIRAGUPPA TALUKS

**Sri. Basanagouda Badarli (Elected by Legislative Assembly) -**

92 (957) Will the Minister for Public Works be pleased to state :-

(a) whether it has come to the notice of the Government that there is most necessity for constructing of the Nitturu-Singapura bridge across the Tungabadra river to provide connectivity to several villages of Sindhanur and Siraguppa taluks ;

(b) if so, it is necessary for the land acquisition by the State Government for the construction of the approach road to the said bridge, the present stage of the said work ;

(c) the timelimit within which the construction work of the said bridge would be commenced and completed by the State Government with the collaboration of the Central Government ?

## FAKE NOC OBTAINED BY MINISTERIAL EMPLOYEE OF THE TRANSPORT DEPARTMENT

**Sri. Sharavana T.A. (Elected by Legislative Assembly) -**

93 (888) Will the Minister for Transport and Muzrai be pleased to state :-

(a) the information of name, copies of NOC, post held at that time and the present working place of ministerial employee who have obtained NOC to pursue diploma automobile degree in the Oxford Polytechnic College from 2022-23 to 2024-25 be furnished ; (yearwise separate information be furnished)

(b) the information of enrolled year to the college and completed year of the degree by the said employee be furnished ;

(c) the copy of the report and complete details of attachments and pages that have been submitted to the Commissioner of Transport department by conducting investigation by the Director, Department of Technical Education regarding the complaints that have been received based on fake service certificate be furnished ;

(d) whether it has come to the notice of the Government that the permanent fake service certificate (Automobile industry) and permanent fake NOC has been submitted by various Group-C ministerial transport employees for the admission without submitting NOC that have been obtained by the transport commissioner; if so, the step taken by the Government ?

## TENDER TO BHARAT VANIJYA EASTERN PRIVATE LIMITED

**Sri N. Ravikumar (Elected by Legislative Assembly) -**

94 (849) Will the Minister for Public Works be pleased to state :-

(a) the particulars of tenders that have been awarded to Bharat Vanijya Eastern Private Limited (BVEPL) of West Bengal during the last 3 years; the complete information alongwith the details of tender amount, name of the work, ongoing work at present, completed work and the work yet to be commenced be furnished ;

(b) whether it is true that construction of 3 road tenders worth of more than 10,000 crores including 828.46 crores has been awarded to Bharat Vanijya Eastern Private Limited of West Bengal (BVEPL) ; the particulars of criterias that have been prescribed for accepting the tenders ?

**NON-ALLOTMENT OF SITES TO EX-SERVICEMEN**

**Sri. D.T. Srinivas (D.T.S) (Teachers' Constituency) -**

95 (892) Will the Minister for Revenue be pleased to state :-

(a) whether it has come to the notice of the Government that the extent of 15 acre and 16 gunta of land in survey numbers 16,17 and 19 of Gantiganahalli in Yelahanka taluk has been sanctioned and handedover for the formation of sites for families of Ex-servicemen under the special Ashraya Schemes ;

(b) the particular of steps that have been initiated to the formation of sites in these lands bearing survey numbers 16,17 and 19; the present stage of the same ;

(c) the number of sites that have been formed so far ; out of which, the number of sites that have been distributed to the families of Ex-servicemen ; if not, the reasons for the same ;

(d) the prevailing obstacles for not handing over the sites by completing the formation of the sites to the families of Ex-servicemen in the land that has been granted by the Government ;

(e) whether it has come to the notice of the Government in this regard ; if so, the steps taken for the same ;

(f) the disciplinary action taken by the Government against the officers who have not formed and allotted the sites ?

## VACANT POSTS OF PORT OFFICERS

**Sri.Ganapati Dumma Ulvekar (Local Authorities Constituency) -**

96 (889) Will the Minister for Fisheries and Ports and Inland Water Transport be pleased to state :-

(a) the total number of posts of Port Officers of the Karnataka Maritime Board; the number of posts which are lying vacant and filled up ; (details be furnished)

(b) whether it has come to the notice of the Government that the posts of port officers are lying vacant ; if so, the steps taken by the Government to fill up the same ;

(c) the prevailing criteria to fill up the posts of Port Officer;

(d) the particulars of ports of the State in which the posts of port officer have been filled up as per the norms ; (complete details be furnished)

(e) the expenditure that has been incurred for the floating jetty during the last 5 years ; (districtwise information be furnished)

(f) the places where the floating Jetties have been constructed in Uttara Kannada District ? (complete details be furnished)

## GUIDELINE VALUES OF LAND ACQUISITION

**Sri. K.S. Naveen (Local Authorities Constituency) -**

97 (955) Will the Minister for Revenue be pleased to state :-

(a) whether the guideline value of lands has been enhanced by the Government in 2023 ;

(b) whether it is true that the compensation is being prescribed based on guideline value of 2019 without considering enhanced guideline value in 2023 during land acquisition ;

(c) the clear reason of the Government for applying guideline value of 2019 eventhough enhanced guideline value of 2023 has been implemented ; whether it has come to the notice of the Government that the financial loss has been occurred to farmers from the same ;

(d) whether there are plans before the Government that the step would be taken to provide fair compensation by considering the basis of existing guideline value in the land acquisition cases in coming days ?

## DEVELOPMENT WORK OF TEMPLES UNDER MUZRAI DEPARTMENT IN DHARWAD

**Sri Pradeep Shettar (Local Authorities Constituency) -**

98 (956) Will the Minister for Transport and Muzrai be pleased to state :-

(a) the number of temples which are coming under the Muzrai Department in Dharwad city area ;

(b) the number of temples which are coming under the Muzrai Department in the limit of Hubballi Central Assembly Constituency and the grant that has been sanctioned for the development work of the said temples ;

(c) the grant that has been released for the development of the historical Chandramouleshwara Temple which is located in Unakal of Hubballi and the present status of progress of development work ?

## GOVERNMENT VETERINARY HOSPITALS AND STAFF

**Sri. D.S. Arun (Local Authorities Constituency) -**

**Smt. Hemalatha Nayak (Elected by Legislative Assembly) -**

**Sri. S.V. Sankanur (Graduates' Constituency) -**

99 (937+951+972) Will the Minister for Animal Husbandry and Sericulture be pleased to state :-

(a) the number of authorized posts of Veterinary Doctors, Veterinary Inspectors and assistant staff in the Government Veterinary Hospitals, Veterinary Clinics and Mobile Veterinary Units in the State/Kalyana Karnataka region; the number of posts which are lying vacant at present ; (districtwise information be furnished)

(b) the number of Veterinary Doctors who have been appointed in the department of animal husbandry and veterinary services during the last 3 years ; the steps taken by the Government to fill up the vacant post ;

(c) the number of veterinary hospitals and primary veterinary centres which are functioning without veterinary doctors in the State ; (districtwise information be furnished)

(d) whetherthe study has been conducted by the Government with regard to the problem of farmers and livestock rearers and impact on cattle disease control, vaccination programmes, milk production and income of farmers due to the shortage of veterinary doctors ? (details be furnished)

**REGARDING LAND GRANTING IN THE STATE**

**Sri Manjunatha Bhandari (Local Authorities Constituency)-**

100 (962) Will the Minister for Revenue be pleased to state :-

(a) the total number of applications that have been received for the granting of land under rule 22-A(3)(1) of the Karnataka Land Grant Rules, 1969 through Gram Panchayats and various departments in Udupi and Dakshina Kannada districts ; the number of cases that have been granted for respective department ; the particular of column of pahani in which the same have been recorded ;

(b) out of the total applications of all kinds that have been submitted for land granting, the number of pending applications ; whether a clear information is available in district, subdivision and taluk level revenue office like date of submissions of these applications, bifurcation of application based on eligibility, present status of application, step to be taken by the office/staff, the reason for pending, estimated date for disposal and others ; if so, the same information be furnished ;

(c) as per the section 71 of the Karnataka Land Revenue Act, 1964 the information about the lands reserved for the respective department has to be entered in the RTC column ; the column of pahani in which the entries are made, the department/persons will have the full power over the granted land ;

(d) the details of the officer/staff who have the responsibility to determine and record in the column of the pahani while granting any Government land; the timelimit prescribed in this regard ;

(e) out of the land granting cases for the departments, the information of various departments where the step has been initiated to record in the concerned column of the RTC ; the pending cases thereof ; the timelimit within which the step would be taken to record the pending cases ?

## MAJOR BRIDGES AT COASTAL REGION

**Sri. Ivan D'Souza (Elected by Legislative Assembly) -**

101(930) Will the Minister for Public Works be pleased to state :-

(a) whether it is true that reports have been received stating that the major bridges in the coastal region are not suitable for transportation ; the number of such bridges that have been identified by the department ; (details be furnished)

(b) there are reports that the bridges have been collapsed and not suitable for vehicular movement due to the heavy rain and the sand is being extracted from the bottom of the bridge ; the steps taken by the Government in this regard ;

(c) the particulars of bridges for which the projects are before the Government for the reconstruction and repair ; (details be furnished)

(d) the grant that has been earmarked for reconstruction/ repair of the bridges in the State ; (details be furnished)

(e) the present stage of the proposal to construct the Shiradi Ghat (tunnel road) in Dakshina Kannada district ; the step taken by the Government in this regard ;

(f) the number of substandard flyovers in the coastal region and the steps taken by the Government in this regard ? (details be furnished)

## THE ROAD DEVELOPMENT BY THE PUBLIC WORKS DEPARTMENT

**Sri. M.L. Anil Kumar (Local Authorities Constituency) -**

102 (860) Will the Minister for Public Works be pleased to state :-

(a) the particulars of road works projects that have been chalked out which are Connecting Roads to Kolar and Kolar district from 2024 till date under the Karnataka State Highway Improvement Project (KSHIP) ; the expenditure of each work ; the present stage of the same ; (complete information be furnished)

(b) the present stage of development of the road work under PPP-DBFOMT- Hybrid annuity covering the length of 36.586 K.M from Vemagal to Tamil Nadu border ; (complete information be furnished)

(c) the present stage of development of road work under PPP-DBFOMT- Hybrid annuity covering the length of

25.615 K.M from Hosakote to Malur and Malur Industrial Area of Malur Elevated Corridor in the State ; (complete information be furnished)

(d) the present stage of the development of the road work under PPP-DBFOMT-Hybrid annuity covering the length of 49.284 K.M of Devanahalli-Vemagal-Kolar ? (complete information be furnished)

## REGARDING TUMAKURU-SHIVAMOGGA HIGHWAY

**Smt. Balkhees Banu (Elected by Legislative Assembly) -**

103 (984) Will the Minister for Public Works be pleased to state :-

(a) the date on which Tumakuru-Shivamogga four lane highway work has been commenced ; the reasons for non completion of the works ;

(b) the share of the Central and State Government for this work ;

(c) whether the land acquisition process has been completed with regard to this project or whether the land acquisition process is yet pending ;

(d) the amount of compensation that has been provided to farmers whose land has been acquired already ; the amount of compensation yet to be paid ;

(e) the time frame that required to complete this work ?

## EDUCATIONAL AND SOCIAL CONDITION OF THE MUSLIM MINORITIES IN THE STATE

**Sri. Shivakumar K. (Nominated) -**

104 (878) Will the Minister for Housing, Wakf and Minority Welfare be pleased to state :-

(a) the population and literacy rate of the muslims minorities according to the estimation for the year 1995,

2000 and 2025 in the State ; (yearwise details be furnished)

(b) the percentage of people who have completed School Education (primary and secondary) and Higher Education in this community ; the major reasons for this community being educationally backward ;

(c) the particulars of major recommendations in the reports of the Rajendra Sachar Committee, Rahman Khan Committee and Ajit Seth Committee that have been constituted to improve the conditions of muslims ; the steps taken by the Government to implement these recommendations ;

(d) the grant that has been allotted and spent by the minority welfare department to bring them into the main stream socially and educationally during the last 3 years ; the particulars of new schemes that have been chalkedout ?

## FORMATION OF LAYOUTS IN REVENUE LANDS IN BENGALURU URBAN DISTRICT

**Sri. H.S. Gopinath (Local Authorities Constituency) -**

105 (980) Will the Minister for Revenue be pleased to state :-

(a) whether B Khata has been issued by the Government for the sites that have been already sold and registered in the layouts developed in the revenue lands in the limit of several villages of Bengaluru urban district ; whether it has come to the notice of the Government that the Government has denied to issuing “B” Khata for the remaining and not yet registered sites in this layout ; if so, the step taken for the same ; (details be furnished)

(b) the severe hardship is being caused to public from this issue, the particulars of steps that would be taken by the Government to setright the same by considering seriously as soon as possible ; (details be furnished)

(c) the time limit within which this issue would be resolved by the Government ? (details be furnished)

**K.R. MAHALAKSHMI**
Secretary
Karnataka Legislative Council

Government Press, Vikasa Soudha Unit, Bengaluru, WD- Copies